**SC No. 288/2023**
**P.W. 16**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**SC No. 288/2023 P.W. 16**

(ಸಾಕ್ಷಿದಾರರನ್ನು ಈ ದಿನ ಅಂದರೆ ದಿನಾಂಕ **06.07.2026.** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **CRV** ವಕೀಲರಿಂದ :

1. ಆರೋಪಿತರ ವಿರುದ್ಧ ನಮ್ಮ ಠಾಣೆಯಲ್ಲಿ ಈ ಪ್ರಕರಣ ಬಿಟ್ಟು ಬೇರೆ ಯಾವುದೇ ಪ್ರಕರಣದ ನಾನು ಆ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದಾಗ ದಾಖಲಾಗಿಲ್ಲ. ನನಗೆ ಆರೋಪಿತರ ಪರಿಚಯ ಮೊದಲೇ ಇರಲಿಲ್ಲ. ದಿನಾಂಕ 26.03.2023 ರಂದು ಈ ಪ್ರಕರಣದ ಕಡತವನ್ನು ಚಾಸ. 25 ರವರಿಂದ ಬೆಳಗ್ಗೆ 7.30 – 7.45 ರ ಅವಧಿಯಲ್ಲಿ ಪಡೆದುಕೊಂಡಿದ್ದೇನೆ. ನಾನು ಬೆಳಗ್ಗೆ ಸುಮಾರು 9.00 ಕ್ಕೆ ಸ್ಥಳಕ್ಕ ಹೋದೆ. ಆರೋಪಿತರ ಪತ್ತೆಗಾಗಿ ಎಷ್ಟು ಗಂಟೆಗೆ ನಾನು ಜ್ಞಾಪನ ಪತ್ರ ನೀಡಿದ್ದೆ ಎಂದು ನೆನಪಿಲ್ಲ. ಕೃತ್ಯ ನಡೆದ ಸ್ಥಳಕ್ಕೂ ನಮ್ಮ ಠಾಣೆಗೂ ಸುಮಾರು 500 ಮೀಟರ್ ಅಂತರ ಇದೆ. ಕೃತ್ಯ ನಡೆದ ಸ್ಥಳದಲ್ಲಿ ಗೋಡೌನ್ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ನೀಡಿಲ್ಲ. ಪಾನ್ ಪರಕ್ ವ್ಯಾಪಾರ ನಡೆಯುತ್ತಿತ್ತು ಎಂದು ಯಾವುದೇ ಲೈಸೆನ್ಸ್ ಪಡೆದಿಲ್ಲ. ನಮ್ಮ ಪ್ರಕಾರ ಆ ಜಾಗಕ್ಕೆ Commercial Activities ನಡೆಯುತ್ತಿದ್ದ ಜಾಗ ಆಗಿತ್ತು. ಆದ ಕಾರಣ Commercial Tax ಇಲಾಖೆಯಿಂದ ಲೈಸೆನ್ಸ್ ಪಡೆಯಬೇಕಿತ್ತು ಎಂದರೆ ಗೊತ್ತಿಲ್ಲ. ಪಂಚರನ್ನು ನಾವು ಜೊತೆಯಲ್ಲಿ ಕರೆದುಕೊಂಡು ಹೋದೆವು. ಪಿರ್ಯಾದಿ ದೂರು ಕೊಡುವ ಕಾಲಕ್ಕೆ ನಾನು ಠಾಣೆಯಲ್ಲಿ ಇರಲಿಲ್ಲ. ದೂರು ದಾಖಲು ಮಾಡುವ ಮೊದಲು ಠಾಣಾಧಿಕಾರಿ ನನಗೆ ಮೌಖಿಕವಾಗಿ ಮಾಹಿತಿ ನೀಡಿದ್ದರು.

2. ಬೆಳಗ್ಗೆ 7.30 ಕ್ಕೆ ದೂರು ದಾಖಲು ಆಗಿತ್ತು. ನಾನು ಆ ದಿನ ಠಾಣೆಗೆ ಬೆಳಗ್ಗೆ 7.45 ಕ್ಕೆ ಬಂದೆ. ನಾನು ಠಾಣಾ ಬಂದ ತಕ್ಷಣ ಈ ಕಡತವನ್ನು ತೆಗೆದುಕೊಂಡೆ. ನಾವು ಪ್ರಿಂಟ್ ತೆಗೆದುಕೊಂಡ ಜಾಗ ಪಿರ್ಯಾದಿ ಗೆ ಸೇರಿದ ಜಾಗವಾಗಿತ್ತು. ದೂರಿನಲ್ಲಿ ಮನೆಯ ಬಗ್ಗೆ ಹೇಳಿಲ್ಲ. ನಾನು ಮಹಜರ್ ಅನ್ನು ಠಾಣೆಯಲ್ಲಿ ತಯಾರಿಸಿ ಪ್ರಿಂಟ್ ತೆಗೆದಿರುವುದು ಎಂದರೆ ಸರಿ ಅಲ್ಲ. ದೂರಿನಲ್ಲಿ ಹಾಗೂ ಸ್ಥಳ ಮಹಜರ್

ನಲ್ಲಿ ಯಾವ ಮೊಬೈಲ್ ಕಿತ್ತುಕೊಂಡು ಹೋಗಿದ್ದಾರೆ ಎಂದು ಹೇಳಿಲ್ಲ ಎಂದರೆ ಸರಿ. ಆ ಗೋಡೌನ್ ನಲ್ಲಿ ವಿದ್ಯುತ್ ಸೌಲಭ್ಯ ಇಲ್ಲ ಎಂದರೆ ಸರಿ ಅಲ್ಲ. ಆ ಬಗ್ಗೆ ನಾನು ಅಂತಿಮ ವರದಿಯಲ್ಲಿ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಗೋಡೌನ್ ನಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದರು ಹಾಗೂ ಎಷ್ಟು ಜನ ಚಾಲಕರು ಇದ್ದರು ಎಂಬ ಬಗ್ಗೆ ನಾನು ತನಿಖೆ ಮಾಡಿಲ್ಲ ಎಂದರೆ ಸರಿ ಅಲ್ಲ. ಇಷ್ಟೇ ಜನ ಕೆಲಸಗಾರರು ಹಾಗೂ ಚಲಾಕರು ಇದ್ದರು ಎಂದು ನಮೂದು ಮಾಡಿಲ್ಲ. ಗೋಡೌನ್ ನಲ್ಲಿ CCTV ಇರಲಿಲ್ಲ. Security Room and Security Guard ಇರಲಿಲ್ಲ. ಅದು ಪಾನ್ ಪರಕ್ ವೇರ್ ಹೌಸ್ ಎಂದು ತೋರಿಸಲು ಯಾವುದೇ ದಾಖಲು ಹಾಜರು ಪಡಿಸಿಲ್ಲ ಎಂದರೆ ಸರಿ. ಗೋಡೌನ್ ನಲ್ಲಿ ಕೇವಲ ಪಾನ್ ಪರಕ್ ವ್ಯಾಪರ ನಡೆಯುತ್ತಿತ್ತು ಎಂದು ಸಾಕ್ಷಿದಾರರು ಹೇಳಿಕೆ ನೀಡಿದ್ದಾರೆ. ಗೋಡೌನ್ ನಲ್ಲಿ ಯಾವ ವ್ಯವಸಹಾರ ನಡೆಯುತ್ತಿದ್ದೆ ಎಂಬ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ.

3. ಬಾಲಾಸುಬ್ರಮಣ್ಯ ರವರ ಮನೆ ಹಾಗೂ ಕೃತ ನಡೆದ ಸ್ಥಳಕ್ಕೂ ಸುಮಾರು 100 ಮೀಟರ್ ಅಂತರ ಇದೆ. 1 ನೇ ಆರೋಪಿಯ ಮನೆ ನೋಡಿದ್ದೇನೆ. ಸದರಿ ಗೋಡೌನ್ ಒಂದು ಸೈಟ್ ಆದ ನಂತರ ಇದೆ ಎಂದರೆ ಸರಿ. 1 ಮತ್ತು 2 ಆರೋಪಿತರ ಹೆಸರು ಮಾತ್ರ ಗೊತ್ತಿತ್ತು. ನನ್ನ ಜ್ಞಾಪನ ಪತ್ರದಲ್ಲಿ ಅವರ ಹೆಸರುಗಳನ್ನು ನಮೂದಿಸಿಲ್ಲ. ಈ ಪ್ರಕರಣದ ದಾಖಲಿಸುವ ಹೊತ್ತಿಗೆ ಆರೋಪಿತರು ಹೆಸರು ಗೊತ್ತಿಲ್ಲ ಆ ಕಾರಣದಿಂದ ನಾನು ಜ್ಞಾಪನ ಪತ್ರದಲ್ಲಿ ಅವರ ಹೆಸರುಗಳು ನಮೂದಿಸಿಲ್ಲ ಎಂದರೆ ಸರಿ ಅಲ್ಲ. ಪೇದೆ ಅವಿನಾಶ್ ಈಗಲೂ ಅದೇ ಠಾಣೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಘಟನಾ ಸಸಮಯದಲ್ಲಿ ವಿದ್ಯುತ್ ಇದ್ದ ಬಗ್ಗೆ ಸಂಬಂಧ ಪಟ್ಟ ಇಲಾಖೆಯಿಂದ ದಾಖಲೆ ಪಡೆದಿಲ್ಲ. ಪಾನ್ ಪರಾಕ್ ವ್ಯಪಾರ ಮಾಡುತ್ತಿದ್ದ ಬಗ್ಗೆ ಯಾವ ಕಾರಣಕ್ಕೆ ದಾಖಲೆಗಳು ಪಡೆದುಕೊಂಡಿಲ್ಲ ಎಂದು ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಬುಲ್ಯಾರೋ ಕಾರು ಇದ್ದ ಬಗ್ಗೆ ತನಿಖೆ ಮಾಡಿರುವುದಿಲ್ಲ, ಕಾರಣ ಅವಶ್ಯಕತೆ ಇರಲಿಲ್ಲ. ಗೋಡೌನ್ Commercial Activity ಇದ್ದ ಜಾಗವಾದ ಕಾರಣ ನಮ್ಮ ಪೊಲೀಸ್ ಬೀಟ್ ಇರುತ್ತದೆ ಎಂದರೆ ಇರಲೇಬೇಕು ಎಂದು ಏನಿಲ್ಲ. ಇಂತಹ ಮುಖ ಬೆಲೆಯ ಹಣವನ್ನೆ ಆರೋಪಿತರು ಕಿತ್ತುಕೊಂಡು ಹೋಗಿದ್ದಾರೆ ಎಂದು ತೋರಿಸಿಸಲು ದೂರಿನಲ್ಲಿ ಆ ಮಾಹಿತಿ ನೀಡಿರುವುದಿಲ್ಲ. ನಮಗೆ ಠಾಣೆಯಲ್ಲಿ ಬೇರೆ ಫೋನ್ ವಿತ್ ನಂಬರ್ ಕೊಟ್ಟಿರುತ್ತಾರೆ. ಸದರಿ ಫೋನ್ ನಂಬರ್ 9480802463 ಆಗಿರುತ್ತದೆ. ಮುನಿರಾಜು ರವರಿಂದ ರಾತ್ರಿ 01.19 ಕ್ಕೆ ಕರೆ ಬಂದಿತ್ತು ಎಂದರೆ ಸರಿ. ಅಲ್ಲಿ ಗೋಡೌನ್

ನಲ್ಲಿ ಅಕ್ರಮ ಚಟುವಟಿಕೆ ನಡೆಯುತ್ತಿದ್ದೆ ಎಂದು ಮಾಹಿತಿ ಬಂದಿತ್ತು. ಆ ಸಮಯದಲ್ಲಿ ನಾನು ಮನೆಯಲ್ಲಿ ಇದ್ದೆ. ನಾನು ಆ ನಂಬರ್ ಗೆ 47 ಸೆಕೆಂಡ್ ಗೆ ಮಾತನಾಡಿದ್ದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿಶಾನೆ.ಪಿ. 22 CDR ನಲ್ಲಿ ಅವಿನಾಶ್ / ಚಾಸಾ. 22 ರವರಿಗೆ ಸಂಬಂಧಪಟ್ಟ ಫೋನ್ ನಂಬರ್ ಇದೆ ಎಂದರೆ ಸರಿ. ಫೋನ್ ಬಂದಾಗ ನಾನು ತೆಗೆದುಕೊಂಡಿದ್ದು ಆರೋಪಿಯೇ ಮುನಿರಾಜು ಎಂದು ಹೇಳಿದ್ದರು. ನಾನು ಕೇಳಿದಕ್ಕೆ ಏನೋ ನಡೆಯುತ್ತಿದ್ದೆ ಎಂದು ಹೇಳಿದ್ದರು. ಆ ಸಮಯಕ್ಕೆ ಯಾರನ್ನು ಕಳುಹಿಸಿ ವಿಚಾರಣೆ ಮಾಡಲಿಲ್ಲ.

4. ನಮ್ಮ ಸಿಬ್ಬಂದಿ ಅವಿನಾಶ್ ರವರು ಅದೇ ಸಮಯಕ್ಕೆ 2 ನೇ ಆರೋಪಿಯ ಜೊತೆಗೆ 108 ಸೆಕೆಂಡ್ ಗಳ ಕಾಲ ಮಾತನಾಡಿದ್ದಾರೆ ಎಂದರೆ ಸರಿ. ಅದೇ ರೀತಿ ಅವಿನಾಶ್ ರವರು ರಾತ್ರಿ 1.35 ಮತ್ತೊಮ್ಮೆ 2 ನೇ ಆರೋಪಿಯ ಜೊತೆಗೆ 117 ಸೆಕೆಂಡ್ ಗಳ ಕಾಲ ಮಾತನಾಡಿದ್ದಾರೆ ಎಂದರೆ ಸರಿ. ನಾನು CDR ವರದಿಯನ್ನು ತೆಗೆದುಕೊಂಡು ಅದನ್ನು ಅಂತಿಮ ವರದಿಗೆ ಹಾಕಿರುತ್ತೇನೆ. ನಾವು ಯಾವ ಕಾರಣಕ್ಕೆ ಅವಿನಾಶ್ ರವರು ಮಾತನಾಡಿದ್ದಾರೆ ಎಂದು ವಿಚಾರಣೆ ಮಾಡಿಲ್ಲ. ಬೆಳಗ್ಗೆ 8.03 ನಿಮಿಷಕ್ಕೆ 53 ಸೆಕೆಂಡ್ ಗಳ ಕಾಲ ಬೆಳಗ್ಗೆ 8.10 ನಿಮಿಷಕ್ಕೆ 51 ಅವಿನಾಶ್ ರವರು ಮಾತನಾಡಿದ್ದಾರೆ ಎಂದರೆ ಸರಿ. ಸಾಮಾನ್ಯವಾಗಿ ಕೆಲವರು ದರೋಡೆ ಮಾಡುವವರು ಪೊಲೀಸ್ ಸಂಪರ್ಕದಲ್ಲಿ ಇರುತ್ತಾರೆ. ನಮ್ಮ ಸಿಬ್ಬಂದಿಯವರು ಆರೋಪಿತರ ಜೊತೆಗೆ ಸಂಪರ್ಕದಲ್ಲಿ ಇದ್ದ ವಿಚಾರ ನನಗೆ ಗೊತ್ತಿಲ್ಲ ಆದರೆ ಅವರು ದಸ್ತಗಿರಿ ಮಾಡಲು ಸಂಪರ್ಕ ಇಟ್ಟುಕೊಂಡಿರಬಹುದು.

5. ಠಾಣೆಯಿಂದ ಆರೋಪಿ ನಂ. 2 ರವರ ಮನೆ ಸುಮಾರು 4 – 6 ಕಿ.ಮಿ. ದೂರ ಆಗಬಹುದು. ನಿಶಾನೆ.ಡಿ. 1 ರಿಂದ 7 ಫೋಟೋದಲ್ಲಿ ಇರುವ ತಮಿಳುನಾಡು ಗಾಡಿಗಳ ಸಿಂಬಲ್ ಗಳು ಇರುತ್ತವೆ ಎಂದರೆ ಸರಿ. ಗೋಡೌನ್ ನಲ್ಲಿ ಪಾನ್ ಪರಕ್ ವ್ಯಾಪರ ಮಾಡುತ್ತಿರಲಿಲ್ಲ ಹಾಗೂ ಬೇರೆ ಚುಟುವಟಿಕೆ ನಡೆಯುತ್ತಿದ್ದ ವಿಚಾರ ನನಗೆ ಗೊತ್ತಿದ್ದರೂ ಸಹಿತಾ ನಾನು ಆರೋಪಿತರು ಮೇಲೆ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿ ಅಲ್ಲ. ಅಕ್ರಮ ಚುಟುವಟಿಕೆ ಗೊತ್ತಿದ್ದರಿಂದ ನಾನು ಬೇರೆ ದಾಖಲಾತಿಯನ್ನು ನೀಡಿರುವುದಿಲ್ಲ ಎಂದರೆ ಸರಿ ಅಲ್ಲ.

**SC No. 288/2023**
**P.W. 16**

6. ಚಾಸಾ. 1 ರಿಂದ 14 ರಾಜಸ್ಥನದವರು ಎಂದರೆ ಸರಿ. ಅವರಿಗೆ ಯಾರಿಗೂ ಕನ್ನಡ ಬರುವುದಿಲ್ಲ ಎಂದರೆ ಸುಮಾರು ಜನಕ್ಕೆ ಬರುತ್ತದೆ ಎಂದು ಹೇಳುತ್ತಾರೆ. ದೂರನ್ನು ಯಾರು ಎಲ್ಲಿ ಬರೆದುಕೊಟ್ಟಿದ್ದಾರೆ ಎಂದು ಗೊತ್ತಿಲ್ಲ. ನಾವು ಆರೋಪಿತರ ಪತ್ತೆಗಾಗಿ ನಮ್ಮ ಸಿಬ್ಬಂದಿಗಳಿಗೆ ಸ್ಥಳಕ್ಕೆ ಹೋಗುವ ಮೊದಲೇ ಜ್ಞಾಪನವನ್ನು ನೀಡಿದ್ದೆ. ಪಿರ್ಯಾದಿ ರವರ ಫೋನ್ switch off ಆಗಿದ್ದಿಯೋ ಇಲ್ಲವೋ ಎಂದು ನಾನು ಪರಿಶೀಲನೆ ಮಾಡಿಲ್ಲ. ನನಗೆ ಆ ಫೋನ್ ನಲ್ಲಿ CDR ನೋಡಬೇಕು ಎಂದು ತಕ್ಷಣ ಕಂಡು ಬರಲಿಲ್ಲ. ಆ ಫೋನ್ ಚಾಲ್ತಿಯಲ್ಲಿ ಇತ್ತೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಪಡೆಯಬೇಕು ಎಂದು ಅನಿಸಲಿಲ್ಲ. ಗೋಡೌನ್ ನ ಕೆಲಸದ ಅವಧಿ ಎಷ್ಟರಿಂದ ಎಷ್ಟು ಗಂಟೆಯ ವರೆಗು ಎಂದು ನಮೂದು ಮಾಡಿಲ್ಲ. ಆ ದಿನ ಪಾನ್ ಪರಕ್ ಎಲ್ಲಿಂದ ತಂದಿದ್ದ ಎಂದು Invoice ಅನ್ನು ನಾನು ಪರಿಶೀಲನೆ ಮಾಡಿಲ್ಲ.

7. ಗೋಡೌನ್ ನಂತರ ಮನೆಗಳು ಇದೆ ಎಂದರೆ ಸರಿ. ಆ ಮನೆಯವರನ್ನು ಈ ಕೃತ್ಯದ ಬಗ್ಗೆ ವಿಚಾರಣೆ ಮಾಡಿಲ್ಲ. ದೂರಿನಲ್ಲಿ ಎರಡು ದೊಣ್ಣೆಗಳನ್ನು ತಂದಿದ್ದ ಬಗ್ಗೆ ಬರೆದಿಲ್ಲ ಎಂದರೆ ಸರಿ. ಸಮಾನ್ಯವಾಗಿ ಹಳ್ಳಿಯ ಕಡೆ ಈ ರೀತಿಯ ದೊಣ್ಣೆಗಳು ಮತ್ತು ಮಚ್ಚು ಸಿಗುತ್ತವೆ ಎಂದರೆ ಸರಿ. ಇಂತಹ ಮುಖ ಬೆಲೆಯ ನೋಟುಗಳು ಕಿತ್ತುಕೊಂಡು ಹೋದ ಬಗ್ಗೆ ಎಲ್ಲಿಯೂ ನಮೂದು ಮಾಡಿಲ್ಲ. ಆರೋಪಿತರು ಯಾವುದೇ ಕೃತ್ಯದಲ್ಲಿ ಭಾಗಿಯಾಗದೇ ಇದ್ದರೂ ನಾನು ಸುಳ್ಳು ಕಥೆಯನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ ಅಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ಈ ಸಾಕ್ಷಿದಾರರನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.